ಅದಾಸಂ.139/18 ಪಿಡಬ್ಲ್ಯು1

ದಿಃ 28.11.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂ. ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣಾ ಭಾಗವಾಗಿ ಪ್ರಮಾಣಪತ್ರವನ್ನು ಸಲ್ಲಿಸುತ್ತಿದ್ದೇನೆ. ಇದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಇದಕ್ಕೆ ಮಾಹಿತಿಯನ್ನು ನಾನೇ ನೀಡಿದ್ದೇನೆ. ಇದರಲ್ಲಿರುವ ಸಹಿ ನನ್ನದೇ ಆಗಿದೆ.

ದಿಃ 06.04.2015 ರ ಕ್ರಯಕರಾರುಪತ್ರವನ್ನು ಹಾಜರುಪಡಿಸಿ ಗುರುತಿಸುತಿ2 ದ್ದೇನೆ. ಇದನ್ನು ನಿಪಿ 1 ಎಂದು ಗುರುತಿಸಲಾಯಿತು. ನಿಪಿ1 ರಲ್ಲಿ ಇರುವ ಪ್ರತಿ ಪುಟದಲ್ಲಿರುವ ನನ್ನ ಸಹಿಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಇವುಗಳನ್ನು ನಿಪಿ1(ಎ ರಿಂದ ಡಿ) ಎಂದು ಗುರುತಿಸಸಲಾಯಿತು. ನಿಪಿ1 ರಲ್ಲಿ ಇರುವ ಪ್ರತಿವಾದಿಯ ಸಹಿಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಇವುಗಳನ್ನು ನಿಪಿ1(ಇ ರಿಂದ ಹೆಚ್ ) ಎಂದು ಗುರುತಿಸಲಾಯಿತು. ನಸಾಕ್ಷಿಗಳಾದ ವೆಂಕಟರವಣಮ್ಮ ಹಾಗೂ ಮದನಮೋಹನ ರೆಡ್ಡಿರವರ ಸಹಿಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಇವುಗಳನ್ನು ನಿಪಿ 1(ಐ ಮತ್ತು ಜೆ) ಎಂದು ಗುರುತಿಸಲಾಯಿತು. ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸುತ್ತಿದ್ದೇನೆ. ಇದನ್ನು ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು. ದಾವಾ ಆಸ್ತಿಯ ಋಣಭಾರ ರಾಹಿತ್ಯ ಪತ್ರವನ್ನು ಹಾಜರುಪಡಿಸುತ್ತಿದ್ದೇನೆ. ಇದನ್ನು ನಿಪಿ 4 ಎಂದು ಗುರುತಿಸಲಾಯಿತು. ದಾವಾ ಆಸ್ತಿಯ ಖಾತಾ ಬದಲಾವಣ ವಹಿಯನ್ನು ಹಾಜರುಪಡಿಸುತ್ತಿದ್ದೇನೆ. ಇದನ್ನು ನಿಪಿ 5 ಎಂದು ಗುರುತಿಸಲಾಯಿತು. ಪ್ರತಿವಾದಿಗೆ ನೀಡಿದ ಕಾನೂನು ತಿಳುವಳಿಕಾ ಪತ್ರವನ್ನುನೋಡಿ ಗುರುತಿಸುತ್ತಿದ್ದೇನೆ.. ಇದನ್ನು ನಿಪಿ 6 ಎಂದು ಗುರುತಿಸಲಾಯಿತು.

(ಹೆಚ್ಚಿನ ದಾಖಲೆಗಳನ್ನು ಒದಗಿಸಲು ವಾದಿಪರ ವಕೀಲರು ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,

ಬಾಗೇಪಲ್ಲಿ